# ಉಗುರುಸುತ್ತು ನಿವಾರಣೆ ಹೇಗೆ?

ಉಗುರುಗಳ ಸುತ್ತ ಕೀವಿನಿಂದ ಕೂಡಿ ನೋವು ಉಂಟು ಮಾಡುವ ಈ ಸಮಸ್ಯೆ ನಿವಾರಣೆಗೆ ಸುಲಭ ಉಪಾಯ ಇದೆ. ಮನೆಮದ್ದಿನಿಂದಲೇ ಈ ನೋವು ನಿವಾರಣೆ ಸಾಧ್ಯ.

★ **ಹರೀಶ್‌ಕುಮಾರ್**



ಉಗುರುಸುತ್ತು ಎಂಬುದು ಉಗುರಿನ ಸುತ್ತಲ ಮೆತ್ತನೆಯ ಭಾಗದಲ್ಲಿ ಸೋಂಕಿನಿಂದ ಏಳುವ ಕೀವುಳ್ಳ ಕುರು. ಕಾಲುಬೆರಳುಗಳಲ್ಲಿ ಏಳಬಹುದಾದರೂ ಕೈಬೆರಳುಗಳ ಸುತ್ತ ಏಳುವುದೇ ಹೆಚ್ಚು. ಉಗುರಿನ ಸುತ್ತಲಿನ ಚರ್ಮವು ಕೆಂಪಾಗಿ ಊದಿಕೊಂಡು ಕೀವು ತುಂಬಿಕೊಂಡು ನೋವನ್ನು ಉಂಟು ಮಾಡುತ್ತದೆ.

ಉಗುರುಸುತ್ತು ದೀರ್ಘಾವಧಿಯದ್ದೂ ಆಗಿರಬಹುದು. ಕೆಲ ದಿನಗಳು ನೋವಿದ್ದು ಆಮೇಲೆ ಕಾಣಿಸದೇ ಇರಬಹುದು. ಮುಳ್ಳು ತಾಗಿ ಅಥವಾ ಗಾಯವಾಗುವುದರಿಂದ ಬ್ಯಾಕ್ಟೀರಿಯಾ ರೋಗಾಣುಗಳ ಸೋಂಕಾಗಿ ಉಗುರು ಸುತ್ತು ಉಂಟಾಗುತ್ತದೆ. ಕಲುಷಿತವಾದ ನೀರಿನಲ್ಲಿ ಹೆಚ್ಚು ಕೆಲಸ ಮಾಡುವುದರಿಂದ ಮತ್ತು ಮಣ್ಣಿನಲ್ಲಿ ಆಟವಾಡುವುದರಿಂದ ಮಣ್ಣಿನಲ್ಲಿನ ಸಿಬುರು ಅಥವಾ ಸಣ್ಣಕಡ್ಡಿ, ಮುಳ್ಳುಗಳು ಉಗುರಿನಲ್ಲಿ ಸೇರಿಕೊಂಡು ಅವುಗಳನ್ನು ತೆಗೆದುಕೊಳ್ಳದೇ ಹಾಗೇ ಬಿಟ್ಟಾಗ ಬಹಳ ದಿನಗಳ ನಂತರ ಅವುಗಳು ಒಳಗೇ ಕೊಳೆತು ಕಾಲಕ್ರಮೇಣ ಉಗುರು ಸುತ್ತಾಗಿ ಬದಲಾಗುತ್ತದೆ.

ಉಗುರು ಸುತ್ತಿನಿಂದಾಗಿ ಉಗುರಿನ ಸುತ್ತಲೂ ಸೋಂಕು ತಗಲಿ ಊದಿಕೊಂಡು ಅದರಲ್ಲಿ ಕೀವು ತುಂಬಿಕೊಂಡು ನೋವು, ಉರಿಯೂತ ಮತ್ತು ಉಷ್ಣತೆಯೂ ಹೆಚ್ಚಾಗಿರುತ್ತದೆ. ವೈದ್ಯರ ಬಳಿಗೆ ಹೋದರೆ ಅವರು ಊದಿಕೊಂಡ ಸ್ಥಳದಲ್ಲಿ ಶುದ್ಧ ಸೂಜಿಯಿಂದ ಚುಚ್ಚಿ ಕೀವನ್ನು ಹೊರ ತೆಗೆದು, ಸೋಂಕುಗಳು ಸೇರದಂತೆ ಮುಂಜಾಗ್ರತೆಯಾಗಿ ಚುಚ್ಚುಮದ್ದು ನೀಡುತ್ತಾರೆ. ಆದ್ದರಿಂದ ವೈದ್ಯರ ಸಲಹೆಯನ್ನು ಪಡೆಯುವುದನ್ನು ನಿರ್ಲಕ್ಷಿಸಬಾರದು. ಇದರ ಹೊರತಾಗಿಯೂ ನಾವು ಉಗುರು ಸುತ್ತಿನ ನಿವಾರಣೆಗಾಗಿ ಈ ಕೆಳಕಂಡ ಚಿಕಿತ್ಸಾ ವಿಧಾನಗಳನ್ನು ಅನುಸರಿಸಬಹುದಾಗಿದೆ.



- ನಿಂಬೆಹಣ್ಣನ್ನು ತೂತು ಮಾಡಿ ಉಗುರು ಸುತ್ತಾಗಿರುವ ಉಗುರಿಗೆ ಸಿಕ್ಕಿಸಿಕೊಳ್ಳುವುದರಿಂದ ನಿವಾರಣೆ ಸಾಧ್ಯ.
- ಕಣಗಲೆಸೊಪ್ಪು, ಬೆಣ್ಣೆ ಮತ್ತು ಸುಣ್ಣವನ್ನು ಬೆರೆಸಿ ನುಣ್ಣಗೆ ಅರೆದು ಉಗುರಿಗೆ ಕಟ್ಟುವುದರಿಂದ ಉಗುರುಸುತ್ತು ಬೇಗನೆ ವಾಸಿಯಾಗುತ್ತದೆ.
- ಹರಳಿನ ಎಲೆಯನ್ನು ಬೆಲ್ಲದೊಂದಿಗೆ ಬೆರೆಸಿ ಉಗುರಿಗೆ ಕಟ್ಟುವುದರಿಂದ ಉಗುರುಸುತ್ತು ವಾಸಿಯಾಗುತ್ತದೆ.
- ಮೆಣಸಿನಕಾಳನ್ನು ಎಮ್ಮೆಯ ಹಾಲಿನಲ್ಲಿ ಅರೆದು ಉಗುರಿಗೆ ಕಟ್ಟುವುದರಿಂದ ಉಗುರು ಸುತ್ತು ವಾಸಿಯಾಗುತ್ತದೆ.
- ಬೇವಿನಸೊಪ್ಪು ಮತ್ತು ಉಪ್ಪನ್ನು ನುಣ್ಣಗೆ ಅರೆದು ಉಗುರಿಗೆ ಕಟ್ಟುವುದರಿಂದ ಉಗುರು ಸುತ್ತು ಬೇಗನೇ ನಿವಾರಣೆಯಾಗುತ್ತದೆ.
- ಅರಿಶಿಣ ಪುಡಿ ಮತ್ತು ಕೆನೆ ಮೊಸರನ್ನು ಚೆನ್ನಾಗಿ ಬೆರೆಸಿ ಉಗುರಿಗೆ ಕಟ್ಟುವುದರಿಂದ ಉಗುರುಸುತ್ತು ಬೇಗನೇ ನಿವಾರಣೆಯಾಗುತ್ತದೆ.
- ಹಸಿ ಅರಿಶಿಣವನ್ನು ತೇದು ರಸವನ್ನು ತೆಗೆದು ಅಳಲೆಕಾಯಿಯ ಚೂರ್ಣವನ್ನು ಬೆರೆಸಿ ಉಗುರಿಗೆ ಲೇಪಿಸಿಕೊಳ್ಳುವುದರಿಂದ ಉಗುರುಸುತ್ತು ನಿವಾರಣೆಯಾಗುತ್ತದೆ.
- ಏಲಕ್ಕಿ ಕಾಳನ್ನು ನಿಂಬೆಯ ರಸದಲ್ಲಿ ಅರೆದು ಬಿಲ್ಲೆ ಮಾಡಿ ಬಟ್ಟೆಯಲ್ಲಿ ಹಾಕಿ ಉಗುರಿಗೆ ಕಟ್ಟುವುದರಿಂದ ಉಗುರುಸುತ್ತು ವಾಸಿಯಾಗುತ್ತದೆ.